ಕಲರ್ ಕಾಂಪೊಸಿಶನ್ ಮತ್ತು ಪರ್ಸ್‌ಪ್ಟಿವ್ ಮುಖ್ಯವಾಗಿರ್ತವ. ಅಲ್ಲಿ ಫಿಗರ್ ಏನದ, ಅಬ್ಜೆಕ್ಟಿವ್ ಥಿಂಗ್ಸ್ ಏನದ, ಯಾವುದೂ ಇರಂಗಿಲ್ಲ. ಮೊದಲೇ ವಿಚಾರ ಮಾಡಿ ಪೇಂಟಿಂಗ್ ಮಾಡೋದಲ್ಲ ಇದು. ಮಾಡ ಮಾಡ್ತಾನೇ ಚಿತ್ರ ಎಮರ್ಜ್ ಆಗ್ತದ. ಇದು ಕ್ರಿಯೇಟಿವಿಯ ಒಂದು ಪ್ರಾಸೆಸ್. ಲ್ಯಾಂಡ್‌ಸ್ಕೇಪದೊಳಗಾಗಲಿ ಪೊರ್ಟ್ರೈಟ್‌ದೊಳಗಾಗಲಿ ಏನಾಗತದ, ಮೊದಲೇ ಮನಸ್ಸಿನೊಳಗ ಒಂದು ಚಿತ್ರ ಇರ್ತದ. ಆದರೆ ಇಲ್ಲಿ ನಮ್ಮ ಮನಸ್ಸಿನಲ್ಲಿ ಬಂದಂಥ ಬಣ್ಣದ ಆಸಕ್ತಿಯೇನದ, ಅದೇ ತೊಡಗಿಕೊಂಡು ಬರ್ತದ. ಚಿತ್ರ ತಯಾರ್ ಆಗಾಗ್ತಾನೇ ಕಲಾವಿದನ ಜತಿಗೇ ಮಾತಾಡಲಿಕ್ಕೆ ಶುರುಮಾಡ್ತದ. ಕಲಾವಿದ ಅದು ಡಿಸೈಡ್ ಮಾಡದಂಗ ಚಿತ್ರ ತಗೀತಾನೇ ಹೊರತು, ತಾನು ವಿಚಾರ ಮಾಡಿದಂಗೆ ಚಿತ್ರ ತಗಿಯೋದಿಲ್ಲ.

◆ **ಬರಹ ಮತ್ತು ಚಿತ್ರಕಲೆ ಬೇರೆ ಮಾಧ್ಯಮಗಳು. ಅವುಗಳ ಸೃಷ್ಟಿಕ್ರಮದಲ್ಲಿ ಏನು ವ್ಯತ್ಯಾಸ?**

ಯಾವುದೇ ಒಂದು ವಸ್ತು ಅಥವಾ ಕಥೆ ರಿಯಲೈಜ್ ಮಾಡ್ಕೋತೀವಲ್ಲ, ಆ ಲೇವಲನಲ್ಲೇ ಚಿತ್ರಕ್ಕೂ ಕೆಲಸ ಮಾಡ್ತದ. ಲೇಖಕ ಇದ್ದಂವ ಯಾವುದೊ ವಿಷಯ ತಗೊಂಡು ವಿಚಾರ ಮಾಡ್ತಾ ಬರೀತಿರ್ತಾನೆ. ಆದರೆ ಅಮೂರ್ತ ಚಿತ್ರಕ್ಕ ಕಲಾವಿದನ ಎದುರಿಗೆ ವಸ್ತು ಏನೂ ಇಲ್ಲ. ತಲಿಯೊಳಗ ಏನೂ ವಿಚಾರವಿಲ್ಲ. ಕೆಲವು ಕಲರ್ಸ್ ಅವ. ಒಂದು ಪ್ಲೇನ್ ಕ್ಯಾನವಾಸ್ ಅದ. ದೊಡ್ಡ ಸ್ಪೇಸದ. ಆ ಸ್ಪೇಸದೊಳಗ ಮೊದಲಿಗೆ ಯಾವುದೊ ಒಂದು ಬಣ್ಣ ಹಚ್ಚಿಬಿಡ್ತೀನಿ. ಹಚ್ಚಿದಮೇಲೆ ಆ ಬಣ್ಣ ನನಗ ಹೇಳ್ತದ, ನನ್ನ ಹತ್ತರ ಇಂಥ ಬಣ್ಣ ಹಾಕು, ಮತ್ತೊಂದು ಹಾಕು ಅಂತ. ಹೀಂಗ ಹೇಳ್ತಾ ಹೋದಂತೆ ನಾನು ಕಲರ್ ಹಾಕ್ತಾ ಹೋಗ್ತೀನಿ. ಆಗ ಕಲರ್ ನಡುವೆ ಸ್ಪೇಸ್ ಬಿಟ್ಕೊಂಡು ಹೋಗ್ತೀನಿ. ಈ ಕಲರ್ಸ್‌ಗೆ ಕೂಡ ಉಸಿರಾಟದ ಸ್ಪೇಸ್ ಬೇಕು. ಯಾಕಂತಂದರ ಒಂದಕ್ಕೊಂದು ಹತ್ತರ ಬಂದು ಸೇರಕೊಂಡರೆ, ಇಡೀ ಕ್ಯಾನ್‌ವಾಸ್ ತುಂಬ ಬರೀ ಬಣ್ಣಾನೇ ಆಗಿಬಿಡ್ತದ. ಕ್ಲಮ್ಸಿ ಆಗ್ತದ. ಪೊರ್ಟ್ರೈಟ್ ಮಾಡಬೇಕಾದರೆ ಸ್ಪೇಸ್ ಬಿಡೋ ಆವಶ್ಯಕತೆ ಇರೋದಿಲ್ಲ. ಆದರೆ ಅಮೂರ್ತ ಚಿತ್ರದೊಳಗ ಎಷ್ಟು ಸ್ಪೇಸ್ ಯುಟಲೈಜ್ ಮಾಡ್ತೀನಿ, ಎಷ್ಟು ಡಿಸ್ಟ್ರಿಬ್ಯೂಶನ್ ಮಾಡ್ತೀನಿ ಅನ್ನೋದು ಬಹಳ ಮುಖ್ಯ. ಅದರ ಫ್ರೀ ಸ್ಪೇಸ್‌ನೊಳಗ ಬ್ರೀದಿಂಗ್ ಕಲರ್ಸ್ ಉಸಿರಾಡ್ತಾವ. ಅದಕ್ಕೆ ಜೀವ ಬರ್ತದೆ. ಇದ್ದಿದ್ದಿಲ್ಲ ಅಂತಂದರ ಡೆಡ್ ಆಗ್ತಾವ. ಅದರಂತೇನೆ ನೋಡುಗರ ಮತ್ತು ಕಲಾಕೃತಿ ಇವರ ಇಬ್ಬರ ನಡುವಿದ್ದಂಥ ಅಂತರ, ಇದು ಪರ್ಸ್‌ಪೆಕ್ಟೀವ್. ಅದಕ ಕಲಾವಿದ ಇದ್ದೋನು ಏನು ಮಾಡಬೇಕು ಅಂತಂದರ, ರಿಲೇಶನ್ ಬಿಟ್ವೀನ್ ಕಲರ್ಸ್ ಅಂಡ್ ರಿಲೇಶನ್ ಬಿಟ್ವೀನ್ ದಿ ಸ್ಪೆಕ್ಟೇಟರ್, ಯಾವಾಗಲೂನೂ ಮೇಂಟೇನ್ ಮಾಡಬೇಕಾಗ್ತದ. ಅಮೂರ್ತ ಏನು ಮಾಡ್ತದ ಅಂತಂದರ, ಇವತ್ತೊಂದು ಮೀನಿಂಗ್ ಕೊಡ್ತದ. ನಾಳೆ ಮತ್ತೊಂದು ಮೀನಿಂಗ್, ನಾಡದ್ದು ಮತ್ತೊಂದು ಮೀನಿಂಗ್ ಕೊಡ್ತದ. ನೋಡುಗನೊಳಗ ಪ್ರತಿದಿನ ಬೆಳೀತಾ ಹೋಗ್ತದ. ಈ ಸಾಧ್ಯತೆ ಲ್ಯಾಂಡ್‌ಸ್ಕೇಪ್ ಪೊರ್ಟ್ರೈಟ್‌ಗಳಲ್ಲಿ ಇರೋದಿಲ್ಲ. ಅಲ್ಲಿ ಇಮೇಜಸ್ ಸ್ಟ್ಯಾಟಿಕ್ ಆಗ್ತಾವು. ಅಮೂರ್ತದೊಳಗೆ ಇಮೇಜಸ್ ಆಲ್ವೇಸ್ ಮೂವಿಂಗ್.

◆ **ನಮ್ಮಲ್ಲಿ ಅಮೂರ್ತ ಚಿತ್ರಕಲೆ ನೋಡುವ ತರಬೇತಿ ಕಡಿಮೆ. ಚಿತ್ರಕ್ಕೆ ಅರ್ಥ ಕೇಳ್ತಾರೆ? ಅಮೂರ್ತ ಚಿತ್ರಕಲೆ ಅಷ್ಟು ಜನಪ್ರಿಯ ಆಗಿಲ್ಲ.**

ಮೊದಲನೇ ಮಾತು ಅಂತಂದರ, ಚಿತ್ರ ಅನುಭವಿಸಬೇಕಾದಂಥ ವಸ್ತುವೇ ಹೊರತು ಅರ್ಥ ಆಗಬೇಕಾದ ವಸ್ತುವಲ್ಲ. ಚಿತ್ರಕ್ಕ ಮೀನಿಂಗ್ ಇರೋದೇ ಇಲ್ಲ. ಇದರೊಳಗೇನದ ಬರೇ ಬಣ್ಣ? ಚಿತ್ರಾನೇ ಇಲ್ಲ ಅಂತಾರ. ಅಮೂರ್ತ ಚಿತ್ರ ನೋಡೋಕೆ ಬೇಕಾದ ಟ್ರೈನಿಂಗ್ ಇಲ್ಲ. ನೋಡುಗರಿಗೂ ಸ್ಪೇಸ್ ಡೆಪ್ತ್ ಮತ್ತು ಪರ್ಸ್‌ಸ್ಪೆಕ್ಟೀವ್‌ಗಳ ಅರಿವು ಇರಬೇಕು. ಪೊರ್ಟ್ರೈಟ್ ಮತ್ತು